
# ಜಾಗತೀಕರಣವೆಂಬ ಜಂಝಾವಾತ

ಎಸ್.ಆರ್. ರಾಮಸ್ವಾಮಿ



ಯಾವುದಾದರೂ ನಾಡನ್ನು ವಶಪಡಿಸಿಕೊಳ್ಳಬೇಕೆಂದಿದ್ದರೆ ನಾನು ಮೊದಲು ಅಲ್ಲಿಯ ಭಾಷೆಯ ಮೇಲೆ ನಿಯಂತ್ರಣ ಸಾಧಿಸುತ್ತೇನೆ ಎಂದಿದ್ದ, ಕನ್‌ಫ್ಯೂಶಿಯಸ್. ಯಾವುದೊ ಒಂದು ಸಮುದಾಯದ ಮಾನಸಿಕತೆಯನ್ನು ಬದಲಾಯಿಸಬೇಕಾದರೆ, ಅಥವಾ ಅದರ ಮಾನಸಿಕತೆಯ ಮೇಲೆ ಹೊಸದಾವುದೊ ಮುದ್ರೆಯನ್ನೊತ್ತಬಯಸಿದರೆ, ಈ ಪ್ರಕ್ರಿಯೆ ಆರಂಭಗೊಳ್ಳುವುದು ಭಾಷೆಯ ಸ್ತರದಿಂದ. ಈ ಆಕ್ರಮಣ ಎಷ್ಟು ನವಿರಾಗಿ ನಡೆಯುತ್ತದೆಂದರೆ ತಾವು ವಿಕೃತಿಗೆ ಸಿಲುಕಿರುವೆವೆಂಬ ಅರಿವೇ ಜನರಿಗೆ ಆಗುವುದಿಲ್ಲ. ಉದಾಹರಣೆಗೆ: ಕೃಷಿಯಲ್ಲಿ ಅಡ್ಡಪರಿಣಾಮ ಸರಣಿಯನ್ನೇ ಸೃಷ್ಟಿಸುವ ಹಾನಿಕಾರಕ ಕೀಟನಾಶಕಗಳ ಬಳಕೆಗೆ ರೈತ ಬಳಸುವ ಪರಿಭಾಷೆ **"ಔಷಧ ಹೊಡೆಯುವುದು."** ಮೂಲಾರ್ಥದಲ್ಲಿ ಔಷಧವೆಂಬುದು ಗುಣಕಾರಿಯಾದ ಜೀವ ಸಹಾಯಕ ಸಾಮಗ್ರಿ. ಆದರೆ ಆ ಶಬ್ದವನ್ನು ಅನ್ಯಾರ್ಥದಲ್ಲಿ ಪ್ರಚಲಿತಗೊಳಿಸುವ ಮೂಲಕ ಕೀಟನಾಶಕಗಳ ಕೊಲೆಗಡುಕತನವನ್ನೂ ದುಷ್ಪ್ರಭಾವಜಾಲವನ್ನೂ ಮರೆಮಾಚಲಾಗಿದೆ.

ಜಾಗತೀಕರಣ ಮೊದಲಾದ ನುಡಿಗಟ್ಟುಗಳೂ ಇಂಥ ಭ್ರಾಮಕ ಲೋಕಕ್ಕೆ ಸೇರಿದವೇ. ವಾಸ್ತವವಾಗಿ ನಿಜಾರ್ಥದ ವಿಶ್ವಕುಟುಂಬದ ಕಲ್ಪನೆಯನ್ನು ಜಗತ್ತಿಗೆ ನೀಡಿದುದು ಭಾರತವೇ. **"ಯತ್ರ ವಿಶ್ವಂ ಭವತ್ಯೇಕನೀಡಂ"** (ವಿಶ್ವವು ಒಂದೇ ಗೂಡು ಎಂಬ ಭಾವನೆ ಬೆಳೆಯಲಿ) ಎಂಬ ಶ್ರುತಿವಾಕ್ಯವೂ **"ವಸುಧೈವ ಕುಟುಂಬಕಂ"** ( ಇಡೀ ಜಗತ್ತೇ ಒಂದು ಕುಟುಂಬ) ಎಂಬ ಪ್ರಾಚೀನೋಕ್ತಿಯೂ ಧ್ವನಿಸುವುದು ಇದನ್ನೇ. ಮನುಷ್ಯ ಮಾತ್ರವಲ್ಲ; ಪ್ರಾಣಿಪಕ್ಷಿಗಳೂ ಕ್ರಿಮಿಕೀಟಗಳೂ ಓಷಧಿ–ವನಸ್ಪತಿಗಳೂ ಸೇರಿದಂತೆ ವಿಶ್ವವೆಲ್ಲ ಏಕಕುಟುಂಬವೆಂಬುದು ಋಷಿಗಳ ವಿಶ್ವವ್ಯಾಪಕ ದರ್ಶನ.

ವಸಾಹತುಶಾಹಿ ಯುಗದಲ್ಲಿ ಇಡೀ ಜಗತ್ತನ್ನು 'ನಾಗರಿಕ'ಗೊಳಿಸಬೇಕಾದ ಹೊಣೆ ನಮ್ಮ ಮೇಲಿದೆ ಎಂದು ('ವೈಟ್ ಮ್ಯಾನ್ಸ್ ಬರ್ಡನ್') ಐರೋಪ್ಯರು ಹೇಳುತ್ತಿದ್ದರು. ಇಂದು ವಿಶ್ವ ವಾಣಿಜ್ಯ ಸಂಘಟನೆ (World Trade Organization) ಹೇಳುತ್ತಿರುವುದೂ ಹಾಗೆಯೇ. ದುರಂತವೆಂದರೆ ಪಾಶ್ಚಾತ್ಯರ ಧೋರಣೆಯನ್ನು ಸ್ವಾರ್ಥಪರವೆಂದು ಗುರುತಿಸುವಷ್ಟು ಸ್ಥೈರ್ಯವನ್ನೂ ಭಾರತದಂಥ ದೊಡ್ಡ ದೇಶವೂ ತೋರದಿರುವುದು. ಪಾಶ್ಚಾತ್ಯರ ವಿಕೃತ ಪರಿಭಾಷೆಯನ್ನೇ ಭಾರತೀಯ ವಕ್ತಾರರೂ ಮಾತನಾಡುತ್ತಾರೆ. ಭಾಷೆಯೂ ಹೀಗೆ ಅಪಮೌಲ್ಯಗೊಂಡಿದೆ.

**ಚಲತೀ ಕೋ ಗದ್ದೀ ಕಹೇ,**
**ದೇಖ್ ಕಬೀರಾ ರೋಯಾ**

"ಓಡಾಡುತ್ತಿರುವುದನ್ನು ಸ್ಥಾಣುವೆಂದು ಜನ ಕರೆಯುತ್ತಿದ್ದಾರೆ. ಇದನ್ನು ನೋಡಿ ಕಬೀರನು ಅಳುವಂತಾಗಿದೆ."

## ಅಸಮತೋಲನ

'ಜೀವನದ ಗುಣಮಟ್ಟವನ್ನು ಏರಿಸುವುದು' ಎಂಬ ಪದಪುಂಜವನ್ನು ಕೆಲ ವರ್ಷಗಳ ಹಿಂದೆ ಬಳಸಲಾಗುತ್ತಿತ್ತು. ಹಲವು ವರ್ಷಗಳಿಗೊಮ್ಮೆ ಇಂಥ ಯಾವುದೋ ಹೊಸ ಶಬ್ದಸಮುಚ್ಚಯವನ್ನು ಹರಿಯಬಿಡಲಾಗುತ್ತದೆ. ಇಂಥ ಒಂದೊಂದು ಶಬ್ದಪುಂಜವೂ ಹಿಂದಿನದರ ವೈಫಲ್ಯವನ್ನೇ ಸೂಚಿಸುತ್ತದೆ ಎನ್ನಬಹುದು.

ಜೀವನದ ಗುಣಮಟ್ಟವನ್ನು ಹೆಚ್ಚಿಸುವುದು ಎಂಬುದು ಅನ್ವಯವಾಗಬೇಕಾದದ್ದು ಯಾರಿಗೆ? ಸೈಕಲ್ ಇದ್ದವರು ಸ್ಕೂಟರನ್ನೂ, ಒಂದು ಕಾರು ಇದ್ದವರು ಎರಡನ್ನೂ ಪಡೆಯುವುದರಿಂದ 'ಜೀವನದ ಗುಣಮಟ್ಟ ಹೆಚ್ಚಿತು' ಎನ್ನಲಾದೀತೆ? ಅದಕ್ಕಿಂತ ಮೂಲಭೂತವಾಗಿ ಕೇಳಬೇಕಾದ ಪ್ರಶ್ನೆಗಳು ಬೇರೆಯೇ ಇರುತ್ತವೆ. ಏನೂ ಜೀವನಾಧಾರ ಇಲ್ಲದವನಿಗೆ ಒಪ್ಪತ್ತಾದರೂ ಊಟ, ನೆಲೆಯಾಗಿ ವಸತಿ ಇಲ್ಲದವನಿಗೆ ಒಂದು ಸಣ್ಣ ಗುಡಿಸಲು – ಇಂಥವನ್ನು ದೇಶದ ಎಲ್ಲರಿಗೂ ಒದಗಿಸುವುದನ್ನು ಮಾತ್ರ 'ಜೀವನದ ಗುಣಮಟ್ಟವನ್ನು ಏರಿಸುವುದು' ಎಂದು ಕರೆಯುವುದು ಸೂಕ್ತವಾಗುತ್ತದೆ. ಸಮಾಜದ ಮೇಲುಸ್ತರಗಳವರ 'ಜೀವನಮಟ್ಟ' ಹೇಗೂ ಏರುತ್ತಲೇ ಹೋಗುತ್ತದೆ; ಅದಕ್ಕಾಗಿ ವಿಶೇಷ ಯೋಜನೆಗಳ ಪ್ರಯಾಸವೇನೂ ಬೇಕಿಲ್ಲ. ಅತಿ ಬಡವರ ಪಾಲಿನ, ಅವರ ಜೀವನದ ಕನಿಷ್ಠ ಅಗತ್ಯಗಳ ಪೂರೈಕೆಯೇ 'ಗುಣಮಟ್ಟದ ಏರಿಕೆ' ಹಾಗೂ ಶ್ರೀಮಂತರ ಪಾಲಿಗೆ ಹೆಚ್ಚಿನ ಸುಸಂಸ್ಕೃತಿ, ನೈತಿಕ ಸುಧಾರಣೆಯನ್ನು 'ಗುಣಮಟ್ಟದ ಏರಿಕೆ' ಎಂದು ಪರಿಗಣಿಸುವುದು ಯುಕ್ತವಾದೀತು.

ಇದೀಗ 'ಆರ್ಥಿಕತೆ' ಎಂದು ಪರಿಗಣಿತವಾಗುತ್ತಿರುವ ಚಟುವಟಿಕೆ ಶೇ.೧೦-೧೫ ರಷ್ಟು ಜನತೆಗೆ ಮಾತ್ರ ಸೀಮಿತವಾಗಿದೆ. ಭೌಗೋಳಿಕವಾಗಿಯೂ ಇದು ಅತ್ಯಂತ ಕಡಮೆ ಪ್ರಮಾಣದಲ್ಲಿ ಪ್ರಸಾರಗೊಂಡಿದೆ. ಹೀಗೆ ತನ್ನ ಮೂಲ ರಚನೆಯಲ್ಲಿಯೇ ಸೀಮಿತವಾಗಿರುವ ಆರ್ಥಿಕತೆ ಹಳ್ಳಿಮೂಲೆಗಳಿಗೆ ತಲುಪುವ ಸಂಭವವೇ ಇಲ್ಲ. ಈ ಅಸಮತೋಲವು ಇತರ ವಿಕೃತಿಗಳಿಗೂ ಎಡೆಮಾಡಿದೆ. ದೇಶದ ಆರ್ಥಿಕತೆ ಎಂದರೆ ನಗರವಾಸಿಗಳ ಹಿತರಕ್ಷಣೆ ಎಂಬ ಅಘೋಷಿತ ಸಮೀಕರಣ ಏರ್ಪಟ್ಟಿದೆ.

ಸರ್ಕಾರಗಳ ಧೋರಣೆಗಳು ಎಷ್ಟೆಲ್ಲ ಹಾವಳಿ ಮಾಡಿದ ಮೇಲೆಯೂ ಈಗಲೂ ಭಾರತದಲ್ಲಿ ಶೇ.೭೫ರಷ್ಟು ಉದ್ಯೋಗಗಳನ್ನು ನಿರ್ಮಿಸಿರುವುದು ಸಾಂಪ್ರದಾಯಿಕ ಅಸಂಘಟಿತ ವಲಯವೇ. ಸಗಟು ರಾಷ್ಟ್ರೋತ್ಪನ್ನದ (ಜಿ.ಡಿ.ಪಿ) ಶೇ.೭೦ರಷ್ಟು ಆವಾಯ ಈಗಲೂ ಬರುತ್ತಿರುವುದು ಆ ವಲಯದಿಂದಲೇ. ಭಾರತದ ರಫ್ತಿನ ಶೇ.೪೦ ರಷ್ಟು ಈಗಲೂ ಒದಗುತ್ತಿರುವುದು ಸಣ್ಣ ಕೈಗಾರಿಕೋದ್ಯಮ ವಲಯದಿಂದ. ಗಣನೀಯ ಪ್ರಮಾಣದ ಉದ್ಯೋಗಗಳನ್ನು ನಿರ್ಮಿಸಿರುವುದೂ ಈ ವಲಯವೇ. ಈ ವಾಸ್ತವತೆಗೆ ಮಾನ್ಯತೆ ನೀಡುವುದಕ್ಕೆ ಬದಲಾಗಿ ದೇಶೀಯ ಉದ್ಯಮಗಳನ್ನು ಹದಗೆಡಿಸುವ ಪ್ರಯತ್ನಗಳೇ ದಶಕಗಳಿಂದಲೂ ಸಾಗಿವೆ.

> **ನಾವು (ಮೂರನೇ ಪ್ರಪಂಚ) ಇಂದು ಹಿಂದಿನ ಸಾಮ್ರಾಜ್ಯಶಾಹಿ ರಾಷ್ಟ್ರಗಳಿಗೆ ಎಂದೆಂದೂ ಇಲ್ಲದಷ್ಟು ಪರಾಧೀನರಾಗಿದ್ದೇವೆ. ಅಂದು ಸಾಮ್ರಾಜ್ಯಶಾಹಿಗಳು ವಹಿಸಿದ್ದ ಪಾತ್ರವನ್ನು ಇಂದು ಐ.ಎಂ.ಎಫ್. ಮತ್ತು ವರ್ಲ್ಡ್ ಬ್ಯಾಂಕ್ ನಿರ್ವಹಿಸುತ್ತಿದೆ. ....ಇಂದು ಅವರು ಮದ್ದುಗುಂಡು, ನೇಣುಹಗ್ಗಗಳ ಬದಲು ವಿಶ್ವ ಬ್ಯಾಂಕ್ ಮತ್ತು ಐ.ಎಂ.ಎಫ್.ಗಳನ್ನು ಬಳಸುತ್ತಿದ್ದಾರೆ.**
> ***– ರೆವರೆಂಡ್ ಜೆಸ್ಸಿ ಜಾಕ್ಸನ್ (ಮಾನವಹಕ್ಕುಗಳ ಆಂದೋಲನದ ನೇತಾರ)***

### ಹೊಸ ಸಾಮ್ರಾಜ್ಯಶಾಹಿ

ಎಲ್ಲ ದೇಶಗಳ ಇಂದಿನ ಆರ್ಥಿಕ ಮುಗ್ಗಟ್ಟಿಗೆ ಕಾರಣ, ಕಳೆದ ಅರವತ್ತು ವರ್ಷಗಳುದ್ದಕ್ಕೂ ಎಲ್ಲೆಡೆ ಅನುಸರಿಸಿಕೊಂಡು ಬಂದ ಅಭ್ಯುದಯದ ಕಲ್ಪನೆಯೇ. ವಾಸ್ತವವಾಗಿ ಬೇರುಗಳೇ ಇಲ್ಲದೆ ಬೆಳೆದಿದ್ದ 'ಅಭ್ಯುದಯ ಸಿದ್ಧಾಂತ' ದ ವೃಕ್ಷ ಬಾಡತೊಡಗಿರುವುದರಿಂದ, ಅವಕ್ಕೆ ಕೃತಕ ಜೀವದಾನ ನೀಡಲು ಪ್ರಯತ್ನಿಸಿರುವುವು ಐ.ಎಂ.ಎಫ್., ವಿಶ್ವ ಬ್ಯಾಂಕ್, ಗ್ಯಾಟ್, ಡಬ್ಲ್ಯುಟಿ.ಓ. ಮೊದಲಾದವು. ಸಾಮ್ರಾಜ್ಯಶಾಹಿ ಯುಗದಲ್ಲಿ ಸೇನಾಶಕ್ತಿಯ ಮೂಲಕ ಐರೋಪ್ಯ ದೇಶಗಳು ಅಧೀನ ದೇಶಗಳ ಮೇಲೆ ಪ್ರಭುತ್ವವನ್ನು ಸ್ಥಾಪಿಸುತ್ತಿದ್ದವು. ಆ ಯುಗ ಮುಗಿದ ಮೇಲೆ ಅಧೀನದೇಶಗಳು ರಾಜಕೀಯವಾಗಿ ಸ್ವತಂತ್ರವೆನಿಸಿದವು. ಆದರೆ ನವಸ್ವತಂತ್ರ ದೇಶಗಳು ಆರ್ಥಿಕ ಸ್ವಾಯತ್ತತೆಯನ್ನು ಸಾಧಿಸದಂತೆ ಬಲಿಷ್ಠ ದೇಶಗಳು ನೋಡಿಕೊಂಡವು; ನವಸ್ವತಂತ್ರ ದೇಶಗಳು ಜಾಗತಿಕ ಬಂಡವಾಳಶಾಹಿ ವ್ಯವಸ್ಥೆಯ ಮೇಲೆ ಅವಲಂಬಿತವಾಗುವಂಥ ಹಲವಾರು ಏರ್ಪಾಡುಗಳನ್ನು ಜಾರಿ ಮಾಡಿದವು. ಈ ಪ್ರಕ್ರಿಯೆಗೆ ಪ್ರಮುಖ ಮಾಧ್ಯಮಗಳಾದವು, ಬಹುರಾಷ್ಟ್ರೀಯ ವ್ಯಾಪಾರಿ ಸಂಸ್ಥೆಗಳು. ಜಾಗತಿಕ ಆರ್ಥಿಕ ಜಾಲ ಇವುಗಳ ವಶದಲ್ಲಿದ್ದುದರಿಂದ ಉದ್ಯಮಶಾಲಿ ದೇಶಗಳ ಉತ್ಪನ್ನಗಳು ಬೃಹತ್‌ಪ್ರಮಾಣದಲ್ಲಿ ಅಭಿವೃದ್ಧಿಶೀಲ ದೇಶಗಳಿಗೆ ರವಾನೆಯಾಗತೊಡಗಿದವು. 'ತೃತೀಯ ವಿಶ್ವ' ದೇಶಗಳ ಪ್ರಾಕೃತಿಕ ಸಂಪನ್ಮೂಲಗಳೂ ಕಡಮೆ ವೇತನದ ಕಾರ್ಮಿಕಶಕ್ತಿಯೂ ಪಾಶ್ಚಾತ್ಯ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಅನುಕೂಲಕರವಾಗಿ ಒದಗಿದವು. ಹೀಗೆ ಅವು ಅಪಾರ ಲಾಭ ಗಳಿಸತೊಡಗಿದವು. ಸಾಲದ ಮರುಪಾವತಿ, ಬಡ್ಡಿಗಳಿಗೆ ಈ ಹೇರಳ ಲಾಭವೂ ಸೇರಿತು. ಹೀಗೆ ಜಗತ್ತಿನ ಅಧಿಕಭಾಗದ ರಾಷ್ಟ್ರಗಳನ್ನು ಪರಾವಲಂಬಿಗಳಾಗಿಯೇ ಇರಿಸಿ ಮುಂದುವರಿಸುವುದು ಬಲಿಷ್ಠ ರಾಷ್ಟ್ರಗಳ ತಂತ್ರವಾಯಿತು.

ವಿದೇಶಿ ಪ್ರಭಾವಗಳ ಪ್ರಸರಣವೇ ಬಡದೇಶಗಳಲ್ಲಿ ಸಮಸ್ಯೆಗಳನ್ನು ಸೃಷ್ಟಿಸುತ್ತದೆ, ವಿಕಾಸದ ಪ್ರಕ್ರಿಯೆಯನ್ನು ವಿಕೃತಗೊಳಿಸುತ್ತದೆ. ಅಭ್ಯುದಯದ ಶ್ರೇಣಿಯಲ್ಲಿ ಹೊಸದಾಗಿ ಮೇಲೇರುತ್ತಿರುವ ದೇಶಗಳು ಬೇರಾವುದೋ ದೇಶಗಳತ್ತ ಕಣ್ಣುಹಾಯಿಸಿ ತಮ್ಮ ದೇಶ ಅವುಗಳಂತೆಯೇ ಆಗಬೇಕೆಂದು ಭಾವಿಸತೊಡಗುತ್ತವೆ. ಆರ್ಥಿಕತೆ ಪ್ರಗತಿಗೊಂಡಂತೆ, ಸಮಾಜದ ಉನ್ನತ ವರ್ಗವು ವಿದೇಶಗಳ ಕಡೆ, ಅದರಲ್ಲೂ ಅಭಿವೃದ್ಧಿಹೊಂದಿದ ದೇಶಗಳ ಕಡೆಗೆ ಅಭಿಮುಖವಾಗುತ್ತದೆ. ಹೀಗೆ ಉಂಟಾದ ಮನೋವ್ಯಗ್ರತೆಯು ಆ ದೇಶದ ನೈಜ ವಿಕಾಸ ಪ್ರಕ್ರಿಯೆಯನ್ನು ಅಸ್ತವ್ಯಸ್ತಗೊಳಿಸುತ್ತದೆ. ಬಾಹ್ಯಶಕ್ತಿಗಳ ಪ್ರಭಾವದಿಂದ ಉಂಟಾಗುವ ಇಂಥ ಸಮಸ್ಯೆಗಳು ಇಂಗ್ಲೆಂಡಿಗಾಗಲಿ, ಜರ್ಮನಿ, ಫ್ರಾನ್ಸ್ ಮೊದಲಾದ ದೇಶಗಳಿಗಾಗಲಿ ಇಲ್ಲದುದರಿಂದ, ಆ ದೇಶಗಳ ಪ್ರಗತಿ ತೀವ್ರವಾಗಿ ನಡೆಯಿತು.

ಭೌತಿಕದೃಷ್ಟಿಯೇ ಪ್ರಧಾನವಾದ 'ಅಭಿವೃದ್ಧಿ' ಪಥದಲ್ಲಿ ಮನುಷ್ಯ ಏನಾಗಬೇಕು ಎಂಬುದಕ್ಕಿಂತ ಅವನು ಅಲ್ಲಿ ಏನು ಮಾಡುತ್ತಾನೆ ಎಂಬುದೇ ಪ್ರಾಶಸ್ತ್ಯ ಪಡೆದುಕೊಂಡಿದೆ. 'ಆರ್ಥಿಕ ಮಾನವ' ಮೊದಲಾದ ಪದಪುಂಜಗಳೆಲ್ಲ ಈ ಮೂಲ ಚಿಂತನಾಬೀಜದ ವಿಸ್ತರಣೆಗಳೇ. ಇದನ್ನು ಪ್ರಬಲಗೊಳಿಸಿದ್ದು ಆಧುನಿಕ ತಂತ್ರಜ್ಞಾನ. ಮನುಷ್ಯನು ಸೃಷ್ಟಿಯ ಒಂದು ಅಂಗವೆಂಬ ತಿಳಿವಳಿಕೆ ಮರೆಯಾಗಿ, ಮನುಷ್ಯನೇ ಪ್ರಕೃತಿಗೆ ಪ್ರಭು ಎಂಬ ಕಲ್ಪನೆ ಇದರಿಂದ ನೆಲೆಗೊಂಡಿತು.

### ನೈತಿಕತೆಯ ಹ್ರಾಸ

ಈ ಸೂತ್ರೀಕರಣ ಸರಳವಾಗಿ ಕಾಣುತ್ತದೆ. ಆದರೆ ಇದರ ಪರಿಣಾಮಪರಂಪರೆ ಬಹಳ ವ್ಯಾಪಕವಾದದ್ದು. ಸಂಪ್ರದಾಯಬದ್ಧವಾದದ್ದೆಲ್ಲ ತಿರಸ್ಕಾರಾರ್ಹ – ಮೊದಲಾದ ವಾದಗಳೆಲ್ಲ ಈ ಭೌತಿಕದೃಷ್ಟಿಯೇ ಪ್ರಧಾನವಾಗಿರುವ ಸೂತ್ರೀಕರಣದಿಂದ

ಹುಟ್ಟಿದವುಗಳೇ. ಸಾಮಾಜಿಕ ಸುವ್ಯವಸ್ಥೆ ಯಾವುದು, ಎಂಥದು ಎಂಬುದನ್ನು ಈಗ ನಿರ್ಧರಿಸುವುದು ವ್ಯಾವಹಾರಿಕ ದಕ್ಷತೆಯೇ ಹೊರತು ನೈತಿಕತೆ ಮೊದಲಾದ ಪರಿಗಣನೆಗಳಲ್ಲ. ಇದರಿಂದ ತಾತ್ತ್ವಿಕ ಸಮಸ್ಯೆ ಉದ್ಭವವಾಗುತ್ತದೆ. ಸ್ವಾರ್ಥಸಾಧನೆಗೆ ಪ್ರಾಮುಖ್ಯತೆಯನ್ನೇನೊ ಕೊಟ್ಟದ್ದಾಯಿತು. ಆದರೆ ಒಬ್ಬ ವ್ಯಕ್ತಿಯ ಸ್ವಾರ್ಥಸಾಧನೆಗೂ ಇನ್ನೊಬ್ಬನದಕ್ಕೂ ಸಂಘರ್ಷ ತಲೆದೋರಿದಾಗ ನಿರ್ಣಯಕ್ಕಾಗಿ ನೈತಿಕತೆಯನ್ನು ಮೊರೆಹೋಗುವಂತಿಲ್ಲ. ಏಕೆಂದರೆ, ಮೇಲಿನ ವ್ಯವಸ್ಥೆಯಲ್ಲಿ ನೈತಿಕತೆಯನ್ನು ಮಾನ್ಯ ಮಾಡದೆ ಬಿಟ್ಟಿರುವುದರಿಂದ! ಹೀಗೆ ಅತಂತ್ರವೂ, ಅಸ್ತವ್ಯಸ್ತವೂ ಆದ ಸ್ಥಿತಿಯುಂಟಾಗುತ್ತದೆ.

ಬಹುರಾಷ್ಟ್ರೀಯ ಕಂಪೆನಿಗಳ ವ್ಯವಹಾರಗಳು ಸಭ್ಯ ವಾಣಿಜ್ಯ ರೀತಿಯವಾಗಿದ್ದಿದ್ದರೆ ಅವು ಲಂಚ ರುಷುವತ್ತು ಮೊದಲಾದ ಅಕ್ರಮ ಮಾರ್ಗಗಳನ್ನು ಏಕೆ ಅನುಸರಿಸುತ್ತಿದ್ದವು? ಎಲ್ಲ ವಾಣಿಜ್ಯ ಸಂಪ್ರದಾಯಗಳನ್ನೂ ಮೀರಿದ ಸವಲತ್ತುಗಳನ್ನು ನೀಡುವ ಮೂಲಕ ತಮ್ಮ ಮಾರುಕಟ್ಟೆ ವಿಸ್ತರಣೆಗೆ ಏಕೆ ಪ್ರಯತ್ನಿಸುತ್ತಿದ್ದವು? ಶತಾಯಗತಾಯ ಹೇಗಾದರೂ ಅವಕಾಶ ಕಲ್ಪಿಸಿಕೊಂಡು ಸ್ಥಳೀಯ ಮಾರುಕಟ್ಟೆಯನ್ನು ಮೆಟ್ಟಿ ತಮ್ಮ ಏಕಸ್ವಾಮ್ಯವನ್ನು ಸ್ಥಾಪಿಸಬೇಕು ಎಂಬ ನಿಟ್ಟಿನಲ್ಲಿಯೇ ಅವರ ಯೋಜನೆಗಳು ನಡೆದಿರುತ್ತವೆ. 'ನೀತಿಯ ಕ್ಷೇತ್ರ ಬೇರೆ; ನಮ್ಮದು ವಾಣಿಜ್ಯ ಕ್ಷೇತ್ರ ಮಾತ್ರ' ಎನ್ನುತ್ತಾರೆ ಅವರು. ಇಂಗ್ಲೆಂಡಿನ ಹಿಂದಿನ ಒಬ್ಬ ಪ್ರಧಾನಿಯೇ ಹೀಗೆಂದಿದ್ದರು: "ಮಧ್ಯಪ್ರಾಚ್ಯ, ಲ್ಯಾಟಿನ್ ಅಮೆರಿಕ ಮೊದಲಾದೆಡೆ ತಮ್ಮ ಸರಕುಗಳ, ಯುದ್ಧಸಾಮಗ್ರಿಗಳ ಮಾರಾಟಕ್ಕಾಗಿ ಬೇರೆ ದೇಶಗಳ ಅಧಿಕಾರಿಗಳಿಗೆ ಲಂಚ ಕೊಡದ ಒಂದೇ ಒಂದು ಬ್ರಿಟಿಷ್ ಕಂಪೆನಿಯೂ ಇಲ್ಲ." ಅಮೆರಿಕದ 'ಹೋಮ್ ಪ್ರಾಡಕ್ಟ್ಸ್' ೪೧ ದೇಶಗಳಲ್ಲಿ ತನ್ನ ವ್ಯಾಪಾರದ ಅವಕಾಶಗಳನ್ನು ಪಡೆದುಕೊಳ್ಳಲು ೩೮ ಲಕ್ಷ ಡಾಲರಿಗೂ ಅಧಿಕ ಲಂಚವನ್ನು ಆಯಾ ದೇಶಗಳ ಅಧಿಕಾರಿಗಳಿಗೆ ಕೊಟ್ಟಿತ್ತು.

### ಕಾಯಿಲೆಗಿಂತ ಚಿಕಿತ್ಸೆಯೇ ಹಾನಿಕರ

ಈ ಹೊತ್ತು, ವಿಶ್ವ ವಾಣಿಜ್ಯ ಸಂಘಟನೆ (WTO) ಇಂದು ಏನು ಮಾಡುತ್ತಿದೆಯೋ ಅದು ಇದ್ದಕ್ಕಿದ್ದಂತೆ ಆದದ್ದಲ್ಲ. ಅದು ಪಾಶ್ಚಾತ್ಯ ಬಲಿಷ್ಠ ದೇಶಗಳು ಮೂವತ್ತು ವರ್ಷಗಳಿಂದ ವ್ಯವಸ್ಥಿತವಾಗಿ ನಡೆಸಿಕೊಂಡು ಬಂದಿರುವ ಪ್ರಕ್ರಿಯೆಯ ಅಂತಿಮ ಘಟ್ಟದ ಫಲಿತಾಂಶ. ಬಹುರಾಷ್ಟ್ರೀಯ ಕಂಪೆನಿಗಳೂ, ಜಾಗತಿಕ ಹಣಕಾಸು ಸಂಸ್ಥೆಗಳೂ ಇಡೀ ವಿಶ್ವದ ಆರ್ಥಿಕತೆಯನ್ನು ಸ್ವಾಧೀನ ಮಾಡಿಕೊಳ್ಳುವುದಕ್ಕಾಗಿ ಅನೇಕ ವರ್ಷಗಳಿಂದ ಪ್ರಯತ್ನ ನಡೆಸಿವೆ. ಈ ಪ್ರಕ್ರಿಯೆಯ ಪ್ರಮುಖ ಅಂಶವೆಂದರೆ ಭೌಗೋಳಿಕ ಗಡಿಗಳನ್ನು ಮೀರಿ, ಸರಕುಗಳು, ಸೇವೆಗಳು, ಬಂಡವಾಳ – ಇವೆಲ್ಲವುಗಳ ಅಂತರರಾಷ್ಟ್ರೀಯ ಸಾಗಾಟವು ಹಿಂದೆ ಇದ್ದುದಕ್ಕಿಂತ ಬಹುಪಾಲು ತೀವ್ರಗೊಂಡದ್ದು. ಇದಕ್ಕೆ ಅಮೆರಿಕೆಯ ರೊನಾಲ್ಡ್ ರೇಗನ್ ಸರ್ಕಾರ ಹಾಗೂ ಬ್ರಿಟನ್ನಿನ ಮಾರ್ಗರೆಟ್ ಥ್ಯಾಚರ್ ಸರ್ಕಾರಗಳು ಪ್ರಬಲವಾದ ಒತ್ತಾಸೆ ಕೊಟ್ಟವು. ಹೀಗೆ ಈ ಪ್ರಕ್ರಿಯೆಯು ಯಾವುದೇ ಹೊಸ ತಂತ್ರಜ್ಞಾನ ಆವಿಷ್ಕರಣಗಳಿಂದ ಆದುದೇನಲ್ಲ. ಬದಲಾಗಿ 'ವಾಷಿಂಗ್ಟನ್ ಕಾನ್‌ಸೆನ್ಸಸ್' ಎಂದು ವ್ಯಂಗ್ಯವಾಗಿ ಕರೆಯಲಾಗುವ ಪಾಶ್ಚಾತ್ಯ ದೇಶಗಳ ಪಾಳೆಯಗಾರಿಕೆ ವ್ಯವಸ್ಥೆಯನ್ನು ಸ್ಥಾಪಿಸುವ ಉದ್ದೇಶದಿಂದ, ಕ್ರಮಕ್ರಮವಾಗಿ ಜಾರಿಗೆ ತಂದಂಥದು. ಎಲ್ಲ ಕಾಯಿದೆಗಳ ಅನಿಯಮೀಕರಣ (Deregulation), ಖಾಸಗೀಕರಣ, ಪ್ರತ್ಯೇಕ ದೇಶಗಳ ಆರ್ಥಿಕ ನೀತಿಗಳ ಮೇಲೆ ಬಾಹ್ಯ ಒತ್ತಡಗಳು, ಬಡ್ಡಿದರ ನಿಯಂತ್ರಣ – ಇವೆಲ್ಲವೂ ಆ ಮೂಲ ಉದ್ದೇಶಕ್ಕೆ ಪೂರಕವಾದ ಕ್ರಮಗಳು, ಅಷ್ಟೆ. ಈ ಜಾಗತಿಕ ಪ್ರವೃತ್ತಿ ಅತಿ ದೊಡ್ಡ ಉದ್ಯಮಗಳಿಗೆ ವರದಾನವಾಯಿತು. ಬಡ ದೇಶಗಳ ಮಾತಿರಲಿ; ಶ್ರೀಮಂತ ದೇಶಗಳಲ್ಲೇ ಇರುವ ಬಡವರ್ಗಗಳಿಗೂ ಈ ಪ್ರಕ್ರಿಯೆಯಿಂದ ಅತ್ಯಲ್ಪ ಪ್ರಯೋಜನವೂ ಆಗಲಿಲ್ಲ. ಪರಿಣಾಮ ಏನು?

> ನಾಲ್ಕು ಟ್ರಿಲಿಯನ್ ಡಾಲರ್‌ಗಳಿಗೂ ಮಿಗಿಲಾದ ಐಶ್ವರ್ಯಸೃಷ್ಟಿಗೆ ಅಗತ್ಯವಾದ ಜಗತ್ತಿನ ಆಸ್ತಿಯ ಶೇ. ೫೮ ರಷ್ಟಕ್ಕೆ ಬಹುರಾಷ್ಟ್ರೀಯ ಕಂಪನಿಗಳು ಒಡೆಯರಾಗಿವೆ.
>
> – *ಜೆಡ್‌ಪೋಕ್*
>
> ಬೃಹತ್ ಬಜೆಟ್ ಅನ್ನು ಹೊಂದಿರುವ ನೂರು ದೇಶಗಳ ಬಜೆಟ್ ಮೊತ್ತಕ್ಕಿಂತಲೂ ಹೆಚ್ಚಾದ ಬಜೆಟ್ ಅನ್ನು ಬಹುರಾಷ್ಟ್ರೀಯ ಕಂಪನಿಗಳು ಪಡೆದಿವೆ.
>
> – *ಡೇವಿಡ್ ಕೊರ್ಟನ್*

- ವಿವಿಧ ದೇಶಗಳ ತಲಾ ವರಮಾನ ಹೆಚ್ಚಳಕ್ಕಿಂತ ಐದು ಪಟ್ಟು ಹೆಚ್ಚು ವೇಗವಾಗಿ ಜಾಗತಿಕ ವಾಣಿಜ್ಯ ವಹಿವಾಟು ಹೆಚ್ಚಿತು.
- ಬಲಿಷ್ಠ ದೇಶಗಳು ತಮ್ಮ ಆರ್ಥಿಕತೆ ಕುಸಿಯದಿರುವಂತೆ ಮಾಡಿಕೊಂಡ ರಕ್ಷಣಾ ಕೋಟೆಗಳಿಂದಾಗಿ ಬಡ ಮತ್ತು ಅಭಿವೃದ್ಧಿಶೀಲ ದೇಶಗಳು ಪ್ರತಿವರ್ಷ ೨೦೦ ಬಿಲಿಯನ್ ಡಾಲರಿನಷ್ಟು ನಷ್ಟಕ್ಕೆ ಗುರಿಯಾಗಿವೆ; ಇದು ವಿವಿಧ ದೇಶಗಳು ನೀಡುವ ನೆರವಿನ ಮೊತ್ತದ ೧೪ ಪಟ್ಟು ಹೆಚ್ಚು ಆಗುತ್ತದೆ.
- ಇಡೀ ಜಗತ್ತಿನ ಜನಸಂಖ್ಯೆಯ ಅರ್ಧದಷ್ಟು ಮಂದಿಯ ಬಳಿ ಇರುವುದಕ್ಕಿಂತ ಹೆಚ್ಚು ಹಣ, ಕೇವಲ ೩೫೫ ಮಂದಿ ಕೋಟ್ಯಧಿಪತಿಗಳ ಹತ್ತಿರ ಶೇಖರಗೊಂಡಿದೆ.
- ಇದೀಗ ಗಾತ್ರದಲ್ಲಿ ಅತಿ ದೊಡ್ಡದಾದ ಕೇವಲ ಹತ್ತು ಕಂಪನಿಗಳು ಕಂಪ್ಯೂಟರ್ ವಲಯದ ಶೇ.೭೦ ರಷ್ಟನ್ನೂ ಔಷಧೋದ್ಯಮದ ಶೇ.೩೫ ರಷ್ಟನ್ನೂ, ಟೆಲಿಕಾಮ್ ಉದ್ಯಮದ ಶೇ.೮೬ ರಷ್ಟನ್ನೂ ಸ್ವಾಧೀನಪಡಿಸಿಕೊಂಡಿವೆ. ಇಂಥ ಏಕಸ್ವಾಮ್ಯ ಸ್ಥಾಪನೆಗೆ ಬಲಿಷ್ಠ ದೇಶಗಳಿಗೆ ಅನುಕೂಲವಾಗುವಂತೆ ರೂಪಿತಗೊಂಡಿರುವ ಪೇಟೆಂಟ್ ಕಾನೂನುಗಳ ಬಳಕೆಯಾಗಿದೆ.
- ೧೯೮೦ ರಿಂದ ಈಚೆಗೆ ಇಡೀ ಜಗತ್ತಿನಲ್ಲಿ ಶೇ.೩ ರಷ್ಟಾದರೂ ವಾರ್ಷಿಕ ಆರ್ಥಿಕ ಹೆಚ್ಚಳ ಸಾಧಿಸಿರುವವು, ಒಟ್ಟು ೧೯೦ ದೇಶಗಳ ಪೈಕಿ ೩೩ ದೇಶಗಳು ಮಾತ್ರ (*ಮುಂದುವರಿಯುವುದು*)